**Code No. 20 Y**

ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರಥಮ ದರ್ಜೆ — ದ್ವಿತೀಯ ಪತ್ರಿಕೆ

## ( ತತ್ವಗಳು )

ಜನವರಿ, 2014

ಸಮಯ : 1 ಗಂಟೆ 30 ನಿಮಿಷಗಳು
ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಮತ್ತು ನೇರವಾಗಿ ಇರಬೇಕು.

1. ಯಾವುದಾದರೂ ಐದು ಉಪಸರ್ಗಗಳ ಉಪಯೋಗವನ್ನು ಸಂಕ್ಷೇಪವಾಗಿ ಬರೆಯಿರಿ. 10

2. ಅರ್ಧ ವೃತ್ತಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ. 10

3. ಆದಿ ಕೊಕ್ಕೆಗಳಿಗೆ ವೃತ್ತವನ್ನು ಸೇರಿಸುವ ಕುರಿತು ಉದಾಹರಣೆ ಸಹಿತ ಬರೆಯಿರಿ. 10

4. ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ : 5 × 4 = 20

   ಅ) ಸ್ವರಗಳು

   ಆ) ದ್ವಿರೂಪ ವ್ಯಂಜನ 'ಯ'

   ಇ) ಸಣ್ಣ ವೃತ್ತದ ಅಂತ್ಯ ಪ್ರತ್ಯಯಗಳು

   ಈ) ಇಮ್ಮಡಿ ರೇಖಾಕ್ಷರಗಳ ಸ್ಥಾನ

   ಉ) ವರ್ಣಪದಗಳು

   ಊ) ಸ್ತ್ರ – ಸ್ಟ್ರ ದೊಡ್ಡ ಕುಣಿಕೆ

5. ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪದಗಳನ್ನು ಶೀಘ್ರಲಿಪಿಯಲ್ಲಿ ಬರೆದು ಅವುಗಳ ಸೂತ್ರಗಳನ್ನು ಬರೆಯಿರಿ : 5 × 2 = 10

   ಅ) ಅಪ್ಪ ಆ) ಮಮಕಾರ

   ಇ) ನೋಡಬೇಕಾದರೆ ಈ) ಒಯ್ಯಾರ

   ಉ) ಚಂಚಲ ಊ) ಐಮೂಲೆ

   ಋ) ಕಟ್ಟಡ ೠ) ಕೇಳಿದ್ದಾರೆ

   ಎ) ಅಲಾಯಿದ

6. ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪದಗಳಿಗೆ ಸಂಕ್ಷೇಪಣೆ ಬರೆಯಿರಿ : 5 × 1 = 5

   ಅ) ಉತ್ತಮೋತ್ತಮ ಆ) ತಳಿರುತೋರಣ

   ಇ) ನ್ಯಾಯಾಧೀಶರು ಈ) ಅಸಹಕಾರ

   ಉ) ಗೃಹವಸತಿ ಊ) ಸುವರ್ಣಮಹೋತ್ಸವ

   ಋ) ಅನುಭವಶಾಲಿಗಳು

[ Turn over

7. ಈ ಕೆಳಗಿನ ಯಾವುದಾದರೂ **ಐದು** ಪದಗಳಿಗೆ ಪದಸಮೂಹಗಳನ್ನು ಬರೆಯಿರಿ : 5 × 1 = 5

| | | | |
|---|---|---|---|
| ಅ) | ಕನ್ನಡ ಪ್ರದೇಶ | ಆ) | ಎಡರುತೊಡರುಗಳು |
| ಇ) | ಒಂದಕ್ಕೆರಡರಷ್ಟು | ಈ) | ಜಾತ್ಯಾತೀತ ಸರ್ಕಾರ |
| ಉ) | ಇವತ್ತಿನ ದಿವಸ | ಊ) | ನೀರಾವರಿ ಸೌಲಭ್ಯಗಳು |
| ಋ) | ಅತಿ ಆಸೆ ಗತಿ ಕೆಡಿಸಿತು | | |

8. ಈ ಕೆಳಗೆ ಕೊಟ್ಟಿರುವ ವಿಷಯವನ್ನು ಶೀಘ್ರಲಿಪಿಯಲ್ಲಿ ಅಗತ್ಯವಿರುವ ಕಡೆ ಸ್ವರಚಿಹ್ನೆಗಳನ್ನು ಉಪಯೋಗಿಸಿ ಬರೆಯಿರಿ : 30

ಮಾನ್ಯ ಸಭಾಪತಿಗಳೆ,

ಎಲ್ಲಾ ಸುಧಾರಣೆಗಳಿಗೂ ಮೂಲ ತಳಹದಿ ಗ್ರಾಮಾಂತರ ಪ್ರದೇಶಗಳು. ಯಾವುದೇ ಒಂದು ಸುಧಾರಣೆ ಆಗಬೇಕಾಗದರೆ ನನ್ನ ಅಭಿಪ್ರಾಯದಲ್ಲಿ ಅದು ಮೊದಲು ಗ್ರಾಮಾಂತರ ಮಟ್ಟದಲ್ಲಿ ಸಾಧನೆ ಆಗಬೇಕು. ಹಾಗೆ ಆ ಸುಧಾರಣೆ ಗ್ರಾಮಾಂತರ ಮಟ್ಟದಲ್ಲಾದ ನಂತರ ನಗರಗಳ ಮಟ್ಟಕ್ಕೆ ಬರಬೇಕು. ಹೀಗೆ ಯಾವುದೇ ಒಂದು ವಿಷಯದಲ್ಲಿ ಈ ಸುಧಾರಣೆ ಗ್ರಾಮಾಂತರ ಮಟ್ಟದಲ್ಲಿ ಸಾಧನೆ ಆಗದಿದ್ದರೆ, ನಗರಗಳ ಮಟ್ಟದಲ್ಲಿ ಸುಧಾರಣೆ ಆಗದಿದ್ದರೆ ಅದು ದೇಶ ಮಟ್ಟದಲ್ಲಿ ಸಾಧನೆ ಆಗುವುದಕ್ಕೆ ಇನ್ನೆಲ್ಲಿ ಅವಕಾಶ ಇದೆ ? ಆದುದರಿಂದ ಗ್ರಾಮಾಂತರ ಮತ್ತು ನಗರ ಮಟ್ಟಗಳಲ್ಲಿ ಸುಧಾರಣೆ ಆಗಲೇಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಮೊದಲು ಹೆಚ್ಚಿನ ಮಟ್ಟದಲ್ಲಿ ಸುಧಾರಣೆ ಆಗಬೇಕು ಎಂಬ ಆಸೆಯಿಂದಲೂ ಮತ್ತು ಈ ಪ್ರಜಾಪ್ರಭುತ್ವದ ಆಡಳಿತದಲ್ಲಿ ಸರ್ಕಾರಗಳನ್ನು ನಡೆಸತಕ್ಕ ಪಕ್ಷಗಳಿಗೆ ಯಾರು ದೇಶದ ಬೆನ್ನುಮೂಳೆಯಂತಿದ್ದಾರೋ ಅವರೇ ಹೆಚ್ಚಿನ ಮಟ್ಟದಲ್ಲಿ ಬೆಂಬಲ ನೀಡುವುದರಿಂದ ಆ ಪ್ರದೇಶಗಳಿಗೆ ಹೆಚ್ಚಿನ ಪ್ರಾತಿನಿಧ್ಯ ದೊರಬೇಕು. ಅವರಿಗೆ ಹೆಚ್ಚಿನ ಪ್ರೋತ್ಸಾಹ ದೊರಕಬೇಕು. ಗ್ರಾಮಾಂತರ ಪ್ರದೇಶದ ಜನರಿಗೆ ಎಲ್ಲಾ ವಿಷಯಗಳಲ್ಲಿಯೂ ಹೆಚ್ಚಿನ ಪ್ರಾತಿನಿಧ್ಯ ಸಿಗಬೇಕು. ಈ ದಿವಸ ಕೇಂದ್ರ ಸರ್ಕಾರದಲ್ಲಿ ಆಡಳಿತವನ್ನು ನಡೆಸುತ್ತಿರುವ ಪಕ್ಷಕ್ಕೆ ಸಿಕ್ಕಿರುವ ಅಧಿಕಾರಕ್ಕೆ ಬಹಳ ಪಾಲು ಬೆಂಬಲ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಜನರ ಓಟುಗಳಿಂದ ಸಿಕ್ಕಿದೆ. ಈ ಕಾರಣಗಳಿಂದ ಗ್ರಾಮಾಂತರ ಪ್ರದೇಶಗಳಿಗೆ ಮೊದಲು ಎಲ್ಲಾ ವಿಚಾರಗಳಲ್ಲೂ ಸುಧಾರಣೆಗಳನ್ನು ತರಬೇಕಾದುದು ಸರ್ಕಾರದ ಆದ್ಯ ಕರ್ತವ್ಯವೆಂದು ಹೇಳಲು ನಾನು ಇಚ್ಛಿಸುತ್ತೇನೆ.